6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ವ್ಯಾಪಾರಿಗಳು ಪಾವತಿಸುವ ಕನ್ನಡ ಗಣಕಯಂತ್ರ ಸಾಫ್ಟ್ ವೇರ್ ಮೇಲಿನ ತೆರಿಗೆಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(9)**ನೇ ಸಂಖ್ಯೆಯ ಅಧಿಸೂಚನೆ.

7. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಆರ್ಗ್ಯಾನಿಕ್ ವೇಸ್ಟ್ ಕನ್‌ವರ್ಟರ್ಸ್ ಮತ್ತು ಪ್ಲಾಸ್ಟಿಕ್ ಟಾರ್ಪಾಲಿನ್ಸ್‌ಗಳಿಗೆ ವ್ಯಾಪಾರಿಯು ಪಾವತಿಸುವ ತೆರಿಗೆಯನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ಶೇ.4ಕ್ಕೆ ಇಳಿಸಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(10)** ನೇ ಸಂಖ್ಯೆಯ ಅಧಿಸೂಚನೆ.

8. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳ ನಿಯಮ 168ಕ್ಕೆ ತಿದ್ದುಪಡಿ ಮಾಡಿ **30.05.2009**ರಂದು ಹೊರಡಿಸಲಾದ **ಎಫ್‌ಡಿ/265/ಸಿಎಸ್‌ಎಲ್/2008**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

**1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆಗಳ ಕಾಯ್ದೆ ಕಲಂ 33(3)ರ ಮೇರೆಗೆ:**

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆ ಕಾಯ್ದೆಯಡಿ ಹನ್ನೆರಡನೇ ತರಗತಿ ಅಥವಾ ಪದವಿಪೂರ್ವ ಶಿಕ್ಷಣದ ಭೋದಕ ತರಗತಿಗಳನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 30.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(7)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆಯ ಕಾಯ್ದೆಯ ಕಲಂ 20(ಎ)ರ ಮೇರೆಗೆ:**

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆ ಕಾಯ್ದೆಯಡಿ ವಿವಾಹ ಸಭಾಂಗಣಗಳಲ್ಲಿ ಏರ್ಪಡಿಸಲಾಗುವ ಕೈಗಾರಿಕಾ ವಸ್ತುಪ್ರದರ್ಶನಗಳನ್ನು ನಡೆಸಿದಲ್ಲಿ ಅಂತಹ ಸಭಾಂಗಣಕ್ಕೆ ಮಾಲೀಕರು ಪಾವತಿಸುವ ತೆರಿಗೆಗೆ ದಿನಾಂಕ

01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 31.03.2009**ರಂದು ಹೊರಡಿಸಲಾದ **ಎಫ್‌ಡಿ/63/ಸಿಎಸ್‌ಎಲ್/2009(8)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**1932ರ ಮೈಸೂರು ಪಣ ತೆರಿಗೆ ಕಾಯ್ದೆಯ ಕಲಂ 8ಎ(2)ರ ಮೇರೆಗೆ:**

ಪಣ ತೆರಿಗೆಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಮೈಸೂರು ನಗರದ ಪರವಾನಿಗೆದಾರ ಪಣ ವ್ಯವಹಾರಿಗಳು ಪಾವತಿಸಬೇಕಾದ ತೆರಿಗೆಯನ್ನು 1ನೇ ಏಪ್ರಿಲ್ 2009ರಿಂದ ಜಾರಿಗೆ ಬರುವಂತೆ ನಿಗದಿಪಡಿಸಿರುವ ಬಗ್ಗೆ **ದಿನಾಂಕ 16.04.2009**ರಂದು ಹೊರಡಿಸಲಾದ **ಎಫ್‌ಡಿ/65/ಸಿಎಸ್‌ಎಲ್/2009**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯ ಕಲಂ 31ರ ಮೇರೆಗೆ:**

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿ ವ್ಯಾಪಾರಿಯು ಮೂಲ ಸೌಕರ್ಯಗಳ ಪ್ರಾಜೆಕ್ಟ್‌ಗಳನ್ನು ಕೈಗೊಂಡಲ್ಲಿ ಆ ಸಂಬಂಧ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಕೆಲವು ನಿಬಂದನೆಗಳಿಗೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 04.05.2009**ರಂದು ಹೊರಡಿಸಲಾದ **ಎಫ್‌ಡಿ/25/ಸಿಇಟಿ/2007(1)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3)ರ ಮೇರೆಗೆ:**

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆಯಡಿ ಅಮದುದಾರ ವ್ಯಾಪಾರಿಯು ಮೂಲ ಸೌಕರ್ಯಗಳ ಪ್ರಾಜೆಕ್ಟ್‌ಗಳನ್ನು ಕೈಗೊಂಡಲ್ಲಿ ಆ ಸಂಬಂಧ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಕೆಲವು ನಿಬಂಧನೆಗಳೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ **ದಿನಾಂಕ 04.05.2009**ರಂದು ಹೊರಡಿಸಲಾದ **ಎಫ್‌ಡಿ/25/ಸಿಇಟಿ/2007(2)**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.